3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.271/2024**

ಪ್ರಾಸಾ 3

ಚಾಸಾ 11

| | |
|---|---|
| ಹೆಸರು | ಅನಿತಾಲಕ್ಷ್ಮೀ |
| ಗಂಡನ ಹೆಸರು | ಬಸವರಾಜು |
| ವಯಸ್ಸು | 22 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಕುಳ್ಳಿನಂಜಯ್ಯನಪಾಳ್ಯ |

ಸಾಕ್ಷಿಯನ್ನು ದಿನಾಂಕ 18.02.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಮೃತ ಮರಿಯಪ್ಪ ನನ್ನ ಚಿಕ್ಕಪ್ಪ. ನಾನು ಪರಿಶಿಷ್ಟ ಜಾತಿಯ ಆದಿದ್ರಾವಿಡ ಜನಾಂಗಕ್ಕೆ ಸೇರಿರುತ್ತೇನೆ. ನಮ್ಮ ಮನೆ ಮತ್ತು ಮರಿಯಪ್ಪರವರ ಮನೆ ಅಕ್ಕಪಕ್ಕದಲ್ಲಿರುತ್ತದೆ. ಮರಿಯಪ್ಪರವರ ಮಗಳು ಹೇಮಲತಾರವರು ಶಾಂತಕುಮಾರ್ ರವರನ್ನು ಪ್ರೀತಿ ಮಾಡುತ್ತಿದ್ದರು. ಆದರೆ ಈ ವಿಚಾರ ಮರಿಯಪ್ಪರಿವರಿಗೆ ಇಷ್ಟವಿರಲಿಲ್ಲ , ಅವರ ಹೆಂಡತಿಗೆ ಒಪ್ಪಿಗೆ ಇತ್ತು. ಈ ಸಂಬಂಧ ಮನೆಯಲ್ಲಿ ಜಗಳ ಆಗುತ್ತಿತ್ತು. ಅವರು ಜಗಳ ಮಾಡುತ್ತಿರುವುದು ನಮ್ಮ ಮನೆಗೆ ಕೇಳಿಸುತ್ತಿತ್ತು. ಮರಿಯಪ್ಪರವರು ನಾನು ಮದುವೆಗೆ ಒಪ್ಪದಿದ್ದರೆ ಶಾಂತಕುಮಾರ್ ಮತ್ತು ಹೇಮಲತಾ ನನ್ನನ್ನು ಕೊಲೆ ಮಾಡುತ್ತಾರೆಂದು ನನ್ನ ಬಳಿ ಹೇಳಿಕೊಳ್ಳುತ್ತಿದ್ದರು. ಆಗ ನಾವು ಮರಿಯಪ್ಪರವರಿಗೆ ಸಮಾಧಾನ ಮಾಡುತ್ತಿದ್ದೆವು.

2) ದಿಃ09.02.2024 ರಂದು ಹೇಮಲತಾರವರು ನನ್ನ ಮೊಬೈಲ್ ಗೆ ರಾತ್ರಿ 8 ಗಂಟೆಗೆ ಕರೆ ಮಾಡಿ ಗವಿಮಠದ ಹತ್ತಿರ ಇರುತ್ತೇನೆ , ಕತ್ತಲೆ ಆಗಿರುತ್ತದೆ , ನಿಮ್ಮ ತಂದೆಯನ್ನು ಕಳುಹಿಸು ಎಂದು ಹೇಳಿರುತ್ತಾಳೆ. ಆ ವಿಚಾರವನ್ನು ನಾನು ನನ್ನ ತಂದೆಗೆ ಹೇಳಿರುತ್ತೇನೆ. ಆದ್ದರಿಂದ ನನ್ನ ತಂದೆ ಹೋಗಿ ಹೇಮಲತಾರವರನ್ನು ಕರೆದುಕೊಂಡು ಬಂದಿರುತ್ತಾರೆ. ನಾನು ಉಪಯೋಗಿಸುತ್ತಿದ್ದ ಮೊಬೈಲ್ ನಂಬರ್ ನ ಪೂರ್ಣ ಸಂಖ್ಯೆ ಈಗ ನೆನಪಿಲ್ಲ. ಕೊನೆಯ 4 ಅಂಕಿಗಳು 0625 ಆಗಿರುತ್ತದೆ. ಹೇಮಲತಾ ರವರು ಮನೆಗೆ ಬಂದ ನಂತರ ನನ್ನ ಮೊಬೈಲ್ ನಿಂದ ಮರಿಯಪ್ಪರವರಿಗೆ ಫೋನ್ ಮಾಡಿ ನಾನು ಮನೆಗೆ ಬಂದಿರುತ್ತೇನೆ, ನೀವು ಯಾವ ಸಮಯಕ್ಕೆ ಬರುತ್ತೀರಿ ಎಂದು ಕೇಳಿರುತ್ತಾಳೆ. ನನ್ನ ಮೊಬೈಲ್ ನ್ನು ತೆಗೆದುಕೊಂಡು ಹೋಗಿ ನಂತರ ತಂದು ಕೊಟ್ಟಿರುತ್ತಾಳೆ. ಅಂದು ರಾತ್ರಿ ಮರಿಯಪ್ಪರವರು ಮನೆಗೆ ಬಂದಿರುವುದಿಲ್ಲ. ದಿಃ 10.02.2024 ರಂದು ಮರಿಯಪ್ಪರವರು ಕೂಲೆಯಾಗಿರುತ್ತಾರೆಂದು ಕಿಶೋರ್ ರವರು ನಮ್ಮ ಮನೆಯ ಹತ್ತಿರ ಬಂದು ನನಗೆ , ನನ್ನ ಅಜ್ಜಿಗೆ  ಹೇಳಿರುತ್ತಾನೆ. ಮರಿಯಪ್ಪರವರು ಯಾವಾಗಲೂ ಹೀರೋ ಹೋಂಡಾ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದರು. ಅರಕೆರೆ ಕಪ್ಪಯ್ಯರವರ ಜಮೀನಿನಲ್ಲಿ ಮರಿಯಪ್ಪರವರನ್ನು ಕೊಲೆ ಮಾಡಿದ್ದರು.

3) 1 ಮತ್ತು 2 ನೇ ಆರೋಪಿಗಳನ್ನು ನನಗೆ ಪೋ.ಠಾಣೆಯಲ್ಲಿ ತೋರಿಸಿರುತ್ತಾರೆ. ಅವರು ಇಂದು ನ್ಯಾಯಾಲಯಜದ ಮುಂದೆ ವಿಸಿ ಯಲ್ಲಿ ಹಾಜರಿದ್ದು ಅವರನ್ನು ಗುರುತಿಸುತ್ತೇ. ನ್ಯಾಯಾಲಯದ ಮುಂದೆ ಹಾಜರಿರುವ 3 ಮತ್ತು 4 ನೇ ಆರೋಪಿಗಳನ್ನು ಗುರುತಿಸುತ್ತೇನೆ. ಚಾಸಾ.1 ರವರು ನನ್ನ ತಂದೆ, ಚಾಸಾ.3 ರವರು ನನ್ನ ಅಜ್ಜಿ. ಈ ಎಲ್ಲಾ ವಿಚಾರಗಳನ್ನು ನಾನು ಪೋ.ಠಾಣೆಯಲ್ಲಿ ಹೇಳಿರುತ್ತೇನೆ.

(ಆರೋಪಿಗಳ ಪರ ವಕೀಲರು ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ